**3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ವ.ನ್ಯಾ.ದಂ., ನ್ಯಾಯಾಲಯ, ಕಡೂರು.**

**ಸಿ. ಸಿ. ಸಂಖ್ಯೆ: 239/2019**

ಫಿರ್ಯಾದುದಾರರು :- **ಶ್ರೀಮತಿ ಹೆಚ್.ಕೆ.ಆಶಾ**

ವಿರುದ್ಧ

ಆರೋಪಿ :- **ಶ್ರೀ ಹೇಮಂತನಾಯ್ಕ**

**ಆ ಪಾ ದ ನೆ**

ಆರೋಪಿಯಾದ ನೀವು ಪಿರ್ಯಾದುದಾರರವರಿಂದ ರೂ.**4,00,000/-**ವನ್ನು ಕುಟುಂಬ ನಿರ್ವಹಣೆಯ ಉದ್ದೇಶದಿಂದ ಸಾಲ ಮಾಡಿದ್ದು, ಸದರಿ ಭಾದ್ಯತೆಯ ಮರುಪಾವತಿಗಾಗಿ ಪಿರ್ಯಾದುದಾರರ ಹೆಸರಿಗೆ ರೂ.**4,00,000/-** ಮೌಲ್ಯದ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ದಾವಣಗೆರೆ ಶಾಖೆ, ಚೆಕ್ ನಂ: **285105** ಸಂಖ್ಯೆಯ ಚೆಕ್ಕನಲ್ಲಿ ದಿನಾಂಕ **01.06.2017** ಎಂದು ನಮೂದು ಮಾಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಖಾತೆಯನ್ನು ಹೊಂದಿರುವ ಕರ್ನಾಟಕ ಬ್ಯಾಂಕ್, ಕಡೂರು ಶಾಖೆ,, ಇಲ್ಲಿ ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು **"Account blocked"** ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹ ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕ: **15.07.2017** ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

ಪ್ರಶ್ನೆ: **1** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ**?**

ಉತ್ತರ:

ಪ್ರಶ್ನೆಃ **2** ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ

(ದಿನಾಂಕಃ **07.02.2024** ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

ಸಹಿ/-
ಸಿ.ಸಿ. **3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.ಗಳು., ಕಡೂರು.